ಮಕ್ಕಳ ಸಾಗಣೆಯ ವ್ಯಾಪ್ತಿ ಮತ್ತು ಅದರ ವಿವಿಧ ರೂಪಗಳ ಗಂಭೀರತೆಯು ಸರ್ಕಾರಕ್ಕೆ ಅರಿವಾಗಿ ಈ ಪಿಡುಗನ್ನು ತಡೆಗಟ್ಟಲು ಸರ್ಕಾರವು ಯೂನಿಸೆಫ್‌ನ ನೆರವಿನೊಂದಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿದೆ.

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಯೂನಿಸೆಫ್ ನ ಸಹಯೋಗದೊಂದಿಗೆ ಮಕ್ಕಳ ಸಾಗಣೆ ವಿರುದ್ಧ ಸಮಾಜದಲ್ಲಿ ಅರಿವು ಮೂಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡಿಸೆಂಬರ್ 2004 ಮತ್ತು ಜನವರಿ 2005ರಲ್ಲಿ ವ್ಯಾಪಕ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಪ್ರಮುಖ ಇಲಾಖೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಪಾಲ್ಗೊಂಡಿರುತ್ತವೆ.

ಕರ್ನಾಟಕ ರಾಜ್ಯದಲ್ಲಿ ಆರು ವರ್ಷದೊಳಗಿನ ಹೆಣ್ಣು ಮಕ್ಕಳು ಜನನದ ಅನುಪಾತ 1991ರಲ್ಲಿ 960 ಇದ್ದು, 2001ರ ಜನಗಣತಿಯಂತೆ ಜನನದ ಅನುಪಾತ 949 ಇರುತ್ತದೆ.

ಗಂಡು ಮಕ್ಕಳ ಜನನಕ್ಕೆ ನೀಡುತ್ತಿರುವ ಹೆಚ್ಚಿನ ಆದ್ಯತೆ ಹೆಣ್ಣುಮಕ್ಕಳ ಜನನದ ಕ್ಷೀಣತೆಗೆ ಕಾರಣವಾಗಿದೆಯೆಂದು ಊಹಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಸಮೀಕ್ಷೆ ಕೈಗೊಂಡಿರುವುದಿಲ್ಲ. ಆದಾಗ್ಯೂ ಇದನ್ನು ತಡೆಗಟ್ಟಲು PNDT (Prenatal Diagnostie Technique) ಕಾಯ್ದೆಯನ್ನು ಜಿಲ್ಲಾ ಮಟ್ಟಗಳಲ್ಲಿ ಸಮಿತಿ ರಚಿಸಿ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆಯ ಪಿಡುಗನ್ನು ತಡೆಗಟ್ಟಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ವಿಮೋಚನಾ, ಬೆಂಗಳೂರು ಸಂಸ್ಥೆಯು ಯೂನಿಸೆಫ್‌ನ ಆರ್ಥಿಕ ನೆರವಿನೊಡನೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೇ ಈ ಒಂದು ದೊಡ್ಡ ಪಿಡುಗಿನ ಸಮಸ್ಯೆ ಬಗೆಹರಿಯಬೇಕಾದರೆ ಸಮಾಜದಲ್ಲಿ ಜಾಗೃತಿ ಆಗಬೇಕು. ಸಮಾಜದಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಗೌರವ ಸಿಗುವಂತೆ ವರ್ತನೆ ಮಾಡತಕ್ಕಂಥ ಮನೋಭಾವ ಮೂಡಿಸುವಲ್ಲಿ ಈ ಸದನ ಹಾಗೂ ಸಮಾಜದ ಎಲ್ಲಾ ಗಣ್ಯರೂ ಕೂಡ ಪ್ರಯತ್ನಿಸಬೇಕಾಗಿದೆ.

10. ಪ್ರಕಟಣೆ

ಅಧ್ಯಕ್ಷರು : ಘನತೆವೆತ್ತ ರಾಜ್ಯಪಾಲರು ನಿನ್ನೆಯ ದಿನ ಏರ್ಪಡಿಸಿದ್ದ ಚಹಾ ಕೂಟವನ್ನು ಈ ದಿನ ಸಂಜೆ ಆರು ಗಂಟೆಗೆ ಏರ್ಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದುದರಿಂದ ಮಾನ್ಯ ಸದಸ್ಯರು ಸದರಿ ಸಮಾರಂಭದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ತಮ್ಮನ್ನು ಕೋರುತ್ತೇನೆ. ಈಗ ಸದನವನ್ನು 2.30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಭೋಜನಾ ವಿರಾಮದ ನಂತರ 2 ಗಂಟೆ 30 ನಿಮಿಷಕ್ಕೆ ಪುನರ್‌ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2.53ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

11. ಶಾಸನ ರಚನೆ

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ. ಆಮೇಲೆ ಅದನ್ನು ತೆಗೆದುಕೊಳ್ಳಬಹುದು. ಎರಡು ಗಮನ ಸೆಳೆಯುವ ಸೂಚನೆಗಳಿವೆ. ಅವೆರಡನ್ನು ಮುಗಿಸೋಣ.